## ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು, ಬನಹಟ್ಟಿ

**ಕ್ರಿ.ಮಿ.ಸಂ.122/2022**
***ಪಿ.ಡಬ್ಲ್ಯು-3***

ದಿನಾಂಕ 22-12-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಂದುವರೆದ ಪಾಟೀಸವಾಲು : ಎದುರುದಾರರ ಪರ ಶ್ರೀ.ಎಂ ಬಿ ಎಚ್ ವಕೀಲರಿಂದಃ-**

ಈ ಕೇಸನ್ನು ವಾಣಿಯವರು ತನ್ನ ಗಂಡ, ರಾಜಶೇಖರ್ ಮತ್ತು ಶ್ರೀಶೈಲ್ ಇವರ ಮೇಲೆ ದಾಖಲಿಸಿದ್ದಾರೆ. ಅರ್ಜಿದಾರಳು ಟಿಸಿಎಚ್ ವ್ಯಾಸಾಂಗ ಮಾಡಿದ್ದಾರೆ. ಆಕೆ ಎಂ.ಎ. ಬಿಎಡ್ ಮಾಡಿದ್ದಾರೆಂದರೆ ನನಗೆ ಗೊತ್ತಿಲ್ಲ. ಆಕೆ ಕಾಲೇಜಿನಲ್ಲಿ ಪ್ರೊಫೆಸರ್ ಇದ್ದಾರೆ ಎಂದರೆ ಮೊದಲು ಇದ್ದರು ಈಗ ಇಲ್ಲ. ಆಕೆ ಪ್ರೊಫೆಸರ್ ಅಂತಾ ಇದ್ದರೂ ಇಲ್ಲಾ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆಕೆಯ ಸಂಬಳದ ಕುರಿತು ನನಗೆ ಮಾಹಿತಿ ಇಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ ಮಾಹಿತಿ ನನಗೆ ಇದೆ. ಅರ್ಜಿದಾರಳು ಮತ್ತು 1 ನೇ ಎದುರುದಾರ ಮಹಾಲಿಂಗಪೂರದಲ್ಲಿ ವಾಸವಿದ್ದರು ಎಂದರೆ ಸರಿ. ಆ ಕಾಲಕ್ಕೆ ಅವರಿಬ್ಬರೂ ಪ್ರೊಫೆಸರ್ ಅಂತಾ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಅವರು ಅಲ್ಲಿ 4-5 ತಿಂಗಳು ಮಾತ್ರ ವಾಸವಿದ್ದರು. ನಂತರ 2014 ರಲ್ಲಿ ಬಿಜಾಪೂರಕ್ಕೆ ಹೋಗಿರುತ್ತಾರೆ. ಅರ್ಜಿದಾರಳು ಅಲ್ಲಿ ವಾಸವಿರಲಿಲ್ಲ ಎಂದರೆ ಸರಿಯಲ್ಲ. ಆಕೆ ಮಹಾಲಿಂಗಪೂರದಲ್ಲೇ ವಾಸವಿದ್ದರು ಎಂದರೆ ಸಮಸ್ಯೆ ಆದಾಗ ಇಲ್ಲಿಗೆ ಬಂದರು. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ ಕಂಡಿಕೆ-6 ಮತ್ತು 7 ರಲ್ಲಿ ಸುಳ್ಳು ಹೇಳಿ ಬರೆಸಿರುತ್ತೇನೆಂದರೆ ಸರಿಯಲ್ಲ. ಅರ್ಜಿದಾರಳು ನಿಖರವಾಗಿ ಎಲ್ಲಿಂದ ಎಲ್ಲಿಯವರೆಗೆ 1 ನೇ ಎದುರುದಾರನ ಮನೆಯಲ್ಲಿ ವಾಸವಿದ್ದರು ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದ ವಿಷಯಗಳ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೆ ನನಗೆ ಗೊತ್ತಿದಷ್ಟು ಮಾಹಿತಿ ಕೊಟ್ಟು ಉಳಿದ ಮಾಹಿತಿಯನ್ನು ಅರ್ಜಿದಾರಳು ಮತ್ತು ಆಕೆಯ ತಂದೆ ಕೊಟ್ಟಿರುತ್ತಾರೆ. ಅರ್ಜಿದಾರಳ ಮತ್ತು ಎದುರುದಾರನ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಾನು ಅರ್ಜಿದಾರಳು ಮತ್ತು ಆಕೆಯ ತಂದೆಯ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಎದುರುದಾರರು ಮತ್ತು ಅವರ ಸಂಬಂಧಿಕರು ಅರ್ಜಿದಾರಳಿಗೆ ತೊಂದರೆ ಕೊಟ್ಟಿದ್ದಾರೆಂದು ಸುಳ್ಳು ಬರೆಸಿರುತ್ತೇನೆಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಅವರು ಹೇಳಿರುತ್ತಾರೆ.

ಮರುವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು.)

ಓದಿ ಹೇ. ಕೇ. ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂ., ಬನಹಟ್ಟಿ.